

ಎಡದಿಂದ ಬಲಕ್ಕೆ :

1. ಪಾರುಪತ್ಯದಾರನಂತೆ ಆತನ ಪರಾಕ್ರಮ (3)
3. ಪರಿಣಾಮ ಒಳ್ಳೆಯದಾಗಿಸಲು ಈ ನಮಸ್ಕಾರವೇ ? (3)
4. ಹುಣ್ಣು ತೋರಿಸಲು ದೀಪ ಬೇಕೇ ? (3)
6. ನೀರಿಗೆ ತತ್ವಾರವೇ ಅಲ್ಲಿ ಸದಾಕಾಲ (4)
7. ಕಾರ್ಖಾನೆಯ ಎಲ್ಲ ಲೆಕ್ಕಗಳನ್ನೂ ಬರೆವ ಗುಮಾಸ್ತ (4)
9. ಆ ಹಳ್ಳಿಯ ಮನೆ ಮನೆಯಲ್ಲೂ ಅತಿ ದೊಡ್ಡ ಪ್ರಳಯ (4)
11. ಹಸ್ತಾಂತರವನ್ನ ಮಾಡುವ ಕ್ರಮದಲ್ಲಿ ಇದೆಂಥ ನಾವಿನ್ಯ? (4)
15. ತೇರನ್ನೇರುವುದಕ್ಕೆ ಮೊದಲು ಜಾಗವನ್ನೆಲ್ಲ ಖಾಲಿ ಮಾಡಿದರೇ ? (3)
16. ಆ ಸುದ್ದಿಗಳೆಲ್ಲ ನಿರಾಧಾರವಾದದ್ದು ಎಂದು ತೀರ್ಮಾನವಾಗಿದೆ (3)
17. ಸಗಣಿ ಗೊಬ್ಬರದಲ್ಲೇ ಬೆಳೆದಿದ್ದು ಈ ಗೆಡ್ಡೆ ತರಕಾರಿ (3)

ಮೇಲಿಂದ ಕೆಳಕ್ಕೆ :

1. ಎಂಥ ಪ್ರಮಾದಕ್ಕೆ ಕಾರಣವಾದಳು ನೋಡಿ, ಈ ಹೆಂಗಸು (3)
2. ಪರಿಹಾರಕ್ಕೆಂದು ತಂದ ಸಾಮಗ್ರಿಗಳಿಗೆ ಭದ್ರ ಕಾವಲು (3)
3. ಭಾರೀ ಪರಿತಾಪಕ್ಕೆ ಕಾರಣವಾದದ್ದು ಆಳ ಕಣಿವೆ (3)
5. ತಾತ್ಪರ್ಯವನ್ನೂ ತಿಳಿಯದವ ಎಂಥ ಪೆದ್ದ ! (3)
6. ನೂರಾರು ಮನೆ ಹೇಳ ಹೆಸರಿಲ್ಲ ಈಗ (3)
8. ಮುನಿವರ್ಯನನ್ನು ಕಂಡೊಡನೆ ವಂದಿಸಿದ ಬಗೆ ಹೇಗೆ ? (3)
10. ಲಾಭ ಬರುವಂತಿರುವ ವಸ್ತುಗಳೆಲ್ಲ ಅಲ್ಲಿ ಪ್ರಾಪ್ತವಾಗುವಂತಿವೆ (3)
12. ಮಾಸಾಂತರದಿಂದ ಬೀಸುತ್ತಿದೆ, ಗಾಳಿ (3)
13. ಹೂವು ಮಾರಲು ಹೋಗುವಾಕೆಗೆ ತಕ್ಕಂತಹ ಪಾದ ರಕ್ಷೆ (3)
14. ಸಾಮಾನ್ಯರಿಗೇನು ಗೊತ್ತು ಇಂಥ ಕೋಪ ? (3)

## 03-08-2017ರ ಉತ್ತರಗಳು

ಎಡದಿಂದ ಬಲಕ್ಕೆ
1. ಉಪದೇಶ 3. ಕಿವಿರು 4. ತತ್ವಾರ 6. ತಡಸಲು 7. ನಡುಗಿಸು 9. ದಿನಕರ 12. ದಳಪತಿ 14. ರಜತ 15. ಹೊನಲು 16. ಲಗುಬಗೆ
ಮೇಲಿಂದ ಕೆಳಕ್ಕೆ: 1.ಉರುವಲು 2. ಶತದಿನ 3. ಕಿವುಡ 5. ರಟಾಗಿ (= ಗಿಟಾರ ತಲೆಕೆಳಗು ) 6. ತಳಹದಿ 8. ಸುರಪತಿ 10. ನಗರ 11. ರಸಾತಲ 12. ದಟ್ಟಹೊಗೆ 13. ಪಗಲು ( = ಹಗಲು)

## ಪ್ರಶ್ನಾ ೦ಕಣ

# 'ಟೈಕಲ್' ಏನು ವಿಶೇಷ ?

'ಟೈಕಲ್' ಅದೊಂದು ಪುರಾತನ ನಗರ. ಅವಶೇಷಗಳ ರೂಪದಲ್ಲಷ್ಟೇ ಅದರ ಪ್ರಸ್ತುತ ಅಸ್ತಿತ್ವ. ಕೊಲಂಬಸ್ ನ ಅನ್ವೇಷಣೆಗೂ ಪೂರ್ವ ಕಾಲದ, ಮಧ್ಯ ಅಮೆರಿಕದ ವಿಖ್ಯಾತ ನಾಗರಿಕತೆಗಳಲ್ಲೆಲ್ಲ ಅತ್ಯಂತ ಪ್ರಸಿದ್ಧವಾದ 'ಮಾಯನ್ ನಾಗರಿಕತೆ'ಗೆ ಸೇರಿದ ಈ ಅದ್ಭುತ, ಬೃಹತ್ ನಗರಾವಶೇಷ ಈಗಿನ 'ಗ್ವಾಟೆಮಾಲಾ' ರಾಷ್ಟ್ರದ ನಿಬಿಡ ವೃಷ್ಟಿವನ ಪ್ರದೇಶದಲ್ಲಿ ಹುದುಗಿ ನಿಂತಿದೆ ( ಚಿತ್ರ 2 ).

ಕ್ರಿಸ್ತ ಪೂರ್ವ 2600 ರ ಸುಮಾರಿಗೆ, ಎಂದರೆ ಈಗ್ಗೆ 4600 ವರ್ಷಗಳ ಹಿಂದೆ, ತಲೆ ಎತ್ತಿದ ಮಾಯನ್ ನಾಗರಿಕತೆ ಬಹು ಮುಖ ಪ್ರತಿಭೆ, ಕೌಶಲ್ಯ, ಸಾಮರ್ಥ್ಯ ಮತ್ತು ಆಸಕ್ತಿಗಳಿಂದಾಗಿ ಕ್ಷಿಪ್ರವಾಗಿ ಅಭಿವರ್ಧನೆಯ ಹಾದಿ ಹಿಡಿದಿತ್ತು. ಕ್ರಿಸ್ತ ಪೂರ್ವ 1800 ರ ವೇಳೆಗೇ ಮಾಯನ್ ಜನ ಯಶಸ್ವೀ ಕೃಷಿಕರಾಗಿದ್ದರು; ಅತ್ಯುತ್ತಮ ಬರಹ ಕ್ರಮ ರೂಪಿಸಿದ್ದರು; ಕಲೆ ಮತ್ತು ವಾಸ್ತು ಶಿಲ್ಪಗಳಲ್ಲಿ ( ಚಿತ್ರಗಳಲ್ಲಿ ಗಮನಿಸಿ ) ನಿಸ್ಸೀಮರಾಗಿದ್ದರು; ಗಣಿತ, ಖಗೋಳ ವಿಜ್ಞಾನ ಕ್ಷೇತ್ರಗಳಲ್ಲೂ ಯುಗಪ್ರವರ್ತಕ ಶೋಧಗಳನ್ನು ನಡೆಸಿದ್ದರು ! ಸಹಜವಾಗಿಯೇ ಮಾಯನ್ನರ ಹಳ್ಳಿಗಳೂ ಭರದಿಂದ ವಿಸ್ತರಣೆಗೊಳ್ಳುತ್ತ ಹಲವಾರು ನಗರಗಳೂ ರೂಪುಗೊಂಡುವು. ಅಂತಹ ನಗರಗಳಲ್ಲೆಲ್ಲ ಅತ್ಯಂತ ಪ್ರಸಿದ್ಧ ನಗರವೇ ಟೈಕಲ್.

ಕ್ರಿಸ್ತಶಕ 1 ನೇ ಸಹಸ್ರಮಾನದ ಸುಮಾರಿಗೆ ಉಚ್ಛ್ರಾಯ ಸ್ಥಿತಿ ತಲುಪಿದ್ದ ಮಾಯನ್ ಸಾಮ್ರಾಜ್ಯದ ರಾಜಧಾನಿಯಾಗಿದ್ದದ್ದು ಟೈಕಲ್ ನ ವಿಶೇಷ. ಒಟ್ಟು19 ದಶಲಕ್ಷದಷ್ಟು ಜನಸಂಖ್ಯೆ ತಲುಪಿದ್ದ ಆ ನಾಗರಿಕತೆಯ ಈ ರಾಜಧಾನಿ ನಗರದ ಅತ್ಯಂತ ಭವ್ಯ ಕಾಲ ಕ್ರಿಸ್ತ ಶಕ 200 ರಿಂದ 900. ಇಡೀ ಟೈಕಲ್ ನಗರದ, ಅಲ್ಲಿನ ಎಲ್ಲ ಬೃಹತ್ ಕಟ್ಟಡಗಳ ನಿರ್ಮಾಣ ನಡೆದದ್ದು, ಪೂರ್ಣಗೊಂಡದ್ದು ಕ್ರಿಸ್ತಪೂರ್ವ 4ನೇ ಶತಮಾನದಿಂದ ಕ್ರಿಸ್ತಶಕ 4ನೇ ಶತಮಾನದ ವರೆಗಿನ 800 ವರ್ಷಗಳ ಅವಧಿಯಲ್ಲಿ.

ಕ್ರಿಸ್ತಶಕ 682 ರಿಂದ 909 ರ ಅವಧಿಯಲ್ಲಿ ಉತ್ತುಂಗ ತಲುಪಿ ಸುಮಾರು 130 ಚದರ ಕಿಲೋ ಮೀಟರ್ ವಿಸ್ತಾರಕ್ಕೆ ಹಬ್ಬಿದ್ದ ಈ ಮಹಾ ನಗರದಲ್ಲಿ ದೇವಾಲಯಗಳು, ಅರಮನೆಗಳು, ಧಾರ್ಮಿಕ ಅಧ್ಯಯನ ಕೇಂದ್ರಗಳು ಇತ್ಯಾದಿ ಸುಮಾರು ಮೂರು ಸಾವಿರ ನಾನಾ ವಿಧ ಸಂಕೀರ್ಣ ಕಲಾಮಯ ಬೃಹತ್ ಕಟ್ಟಡಗಳಿವೆ ( ಚಿತ್ರ3). ಅಚ್ಚರಿ ತರಿಸುವಂತಹ ವಿಶಾಲ ರಸ್ತೆಗಳು, ಜಲ ಸಂಗ್ರಹಣೆ ಮತ್ತು ಸರಬರಾಜು ವ್ಯವಸ್ಥೆಗಳು, ನಗರ ಕೇಂದ್ರವನ್ನು ಸುತ್ತುವರಿದ ಜನ ವಸತಿ ಮತ್ತು ಅದರ ಹೊರಗೆ ಇಡೀ ನಗರವನ್ನು ಪರಿವರಿಸಿದ ಬೇಸಾಯ ಭೂಮಿ ಹೀಗೆ ರೂಪಿಸಲಾಗಿದ್ದ ಟೈಕಲ್ ನಗರದಲ್ಲಿ ನೆಲೆಸಿದ್ದ ಜನರ ಸಂಖ್ಯೆ ಒಂದು ಲಕ್ಷ ಮುಟ್ಟಿತ್ತು.




ಆದರೆ, ಏಕೋ ಏನೋ, ಕ್ರಿಸ್ತಶಕ ಹತ್ತನೇ ಶತಮಾನದ ಆದಿಯಲ್ಲಿ ಮಾಯನ್ ಜನ ಸಂಖ್ಯೆ ಇದ್ದಕ್ಕಿದ್ದಂತೆ ಕ್ಷೀಣಿಸಿ ಉಳಿದ ಜನರೂ ಊರು ನಗರಗಳನ್ನೆಲ್ಲ ತ್ಯಜಿಸಿ ಚದುರಿಹೋದರು ! ಆಗಲೇ ಟೈಕಲ್ ನಗರವೂ ಖಾಲಿಯಾಗಿ ಕ್ರಮೇಣ ನಿಬಿಡ ಅರಣ್ಯದಲ್ಲಿ ಮರೆಯಾಗಿ ಹೋಗಿತ್ತು. ಇಸವಿ 1848 ರ ಸುಮಾರಿಗೆ ಪತ್ತೆಯಾಗಿ, 19 ನೇ ಶತಮಾನದ ಅಂತ್ಯದ ವೇಳೆಗೆ ಉತ್ಖನನ ನಡೆದು, 1956 ರಲ್ಲಿ ಈ ಇಡೀ ನಗರಾವಶೇಷ ಬೆಳಕಿಗೆ ಬಂತು. 1979 ರಲ್ಲಿ ಯೂನಿಸೆಫ್ ನ ವಿಶ್ವ ಪರಂಪರೆಯ ತಾಣಗಳ ಪಟ್ಟಿಯನ್ನೂ ಸೇರಿ ಟೈಕಲ್ ವಿಶ್ವ ಪ್ರಸಿದ್ಧಿಯನ್ನು ಪಡೆದಿದೆ.

■ ಎನ್. ವಾಸುದೇವ್